# ಪ್ರೀತಿಯಷ್ಟೇ ಸಾಲದು, ಎಚ್ಚರವೂ ಬೇಕು



**ವಿವೇಚನೆಯಿಲ್ಲದ ಪ್ರೀತಿ ಮಗುವಿನ ಬೆಳವಣಿಗೆಗೆ ಮಾರಕವಾಗಬಹುದು. ಯಾವುದು ಹಿತ, ಯಾವುದು ಅಹಿತ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳುವ ಅರಿವನ್ನು ಮಕ್ಕಳಲ್ಲಿ ಮೂಡಿಸಬೇಕಾದುದು ಪೋಷಕರು ಮತ್ತು ಶಿಕ್ಷಕರ ಜವಾಬ್ದಾರಿ.**

■ ಡಾ. ಕೆ.ಬಿ. ರಂಗಸ್ವಾಮಿ

ಶಾಲಾದಿನಗಳಲ್ಲಿರುವಾಗ ಧೂಮಪಾನ ಮತ್ತು ಮದ್ಯಪಾನಗಳಂಥ ಸಂಗತಿಗಳು ಬಹು ದೊಡ್ಡ ಅಪರಾಧಗಳೆಂಬ ಭಾವನೆ ನಮ್ಮಲ್ಲಿದ್ದಿತು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ಭರಮಪ್ಪ ಮೇಷ್ಟ್ರು ಹಾರ್ಮೋನಿಯಂ ಮೇಲೆ ಕೈಯಾಡಿಸುತ್ತಾ, ‘ಸದಾ ಶ್ರೀರಾಮರ ಪದಾವ ಹೇಳುತೀನಿ ಘಟಿಂಗ ಸಹವಾಸ ಮಾಡಬಾರದು... ಮಾಡಿದರೆ ಮಾಡಿಕೋ ಮತ್ತು ಒಂದು ಹೇಳುತೀನಿ ಬೀಡಿ ಸಿಗರೇಟು ಮಾತ್ರ ಸೇದಬಾರದು’ ಎಂದು ಪ್ರಾರಂಭವಾಗಿ ಹೆಂಡ ಸಾರಾಯಿ ಮುಂತಾದ ದುರಭ್ಯಾಸಗಳ ಬಗ್ಗೆ ತಿಳಿಹೇಳುವ ಹಾಡೊಂದನ್ನು ರಾಗವಾಗಿ ಹಾಡುತ್ತಾ ನಮ್ಮಿಂದಲೂ ಹಾಡಿಸುತ್ತಿದ್ದರು. ಹಾಗಾಗಿ ನಮಗೆ ಇಂಥ ದುರಭ್ಯಾಸಗಳು ಕೆಟ್ಟವೆಂಬ ಭಾವ ಸಹಜವಾಗಿಯೇ ಮೂಡಿಬಿಟ್ಟಿತ್ತು. ಜೊತೆಗೆ ಮೇಷ್ಟ್ರ ರೂಲ್ ದೊಣ್ಣೆಯ ಭಯವೂ ಇದ್ದಿತು.

ಬೆಂಗಳೂರಿಗೆ ಬಂದು ಹಾಸ್ಟೆಲಿನಲ್ಲಿ ವಾಸಿಸತೊಡಗಿದಾಗ ನನ್ನ ಕೆಲವು ಸಹಪಾಠಿಗಳು ಆಗಲೇ ಸಿಗರೇಟು ಸೇದುವುದನ್ನು ಕಲಿತಿದ್ದರು. ನಾನು ವೈಯಕ್ತಿಕವಾಗಿ ಸಿಗರೇಟು ಸೇದದಿದ್ದರೂ ಗೆಳೆಯರು ಸೇದಿಬಿಟ್ಟ ಹೊಗೆ ಕುಡಿದುದೇ ಹೆಚ್ಚು. ಹಾಗೆಯೇ ಆ ಕಾಲಕ್ಕೆ ಮಾದಕ ದ್ರವ್ಯ ಸೇವನೆಯಂಥದ್ದು ಕದ್ದುಮುಚ್ಚಿ ನಡೆಯುವ ಸಂಗತಿಯಾಗಿರುತ್ತಿತ್ತು ಮತ್ತು ಅದಕ್ಕೆ ದಾಸರಾಗಿದ್ದವರು ಬಹುಬೇಗ ನೋಟೆಡ್ ಆಗಿಬಿಡುತ್ತಿದ್ದರು.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಾನು ಕಲಬುರ್ಗಿಯ ಮೋಹನ್ ಲಾಡ್ಜ್ ಎದುರಲ್ಲಿ ಸಂಜೆಯ ಪ್ರಾಕ್ಟೀಸಿಗಾಗಿ ಒಂದು ಕ್ಲಿನಿಕ್ ಇಟ್ಟುಕೊಂಡಿದ್ದೆ. ಸೆಲ್ಲಾರ್‌ನಲ್ಲಿದ್ದ ಆ ನನ್ನ ಕ್ಲಿನಿಕ್ಕಿನ ಪಕ್ಕದಲ್ಲಿ ಔಷಧದ ಅಂಗಡಿಯೊಂದಿತ್ತು. ಅದೊಂದು ದಿನ ನಾನು ಆ ಅಂಗಡಿಯ ಮುಂದೆ ನಿಂತಿದ್ದಾಗ ಯುವಕನೊಬ್ಬ ಕೆಮ್ಮಿನ ಔಷಧವೊಂದನ್ನು ಕೊಂಡುಕೊಂಡ. ಎರಡು ಹೆಜ್ಜೆ ಅತ್ತ ಹೋದ ಆತ, ಬಾಟಲಿಯಲ್ಲಿದ್ದ ಎಲ್ಲಾ ಔಷಧವನ್ನು ನೀರಿನಂತೆ ಗಟಗಟನೆ ಕುಡಿದು, ಖಾಲಿ ಬಾಟಲಿಯನ್ನು ಮೂಲೆಯೊಂದರಲ್ಲಿ ಬಿಸಾಡಿ ಹೊರಟೇ ಹೋದ. ಅಂಗಡಿಯಾತನನ್ನು ಆ ಕುರಿತು ವಿಚಾರಿಸಿದಾಗ, ‘ಇದು ಮಾಮೂಲಿ ಸರ್. ಮತ್ತೇರಿಸಿಕೊಳ್ಳಲು ಹಾಗೆ ಕುಡಿಯುತ್ತಾರೆ. ಕೊಡದಿದ್ದರೆ ಜಗಳ ಮಾಡುತ್ತಾರೆ’ ಎಂದು ಆತ ಹೇಳಿದುದನ್ನು ಕೇಳಿ ಅಚ್ಚರಿಯೆನಿಸಿಬಿಟ್ಟಿತ್ತು. ಅದೇ ಕಾರಣಕ್ಕಾಗಿಯೇ ಅಂಥ ಕೆಲವು ಕೆಮ್ಮಿನ ಔಷಧಗಳನ್ನು ಈಗ ಬ್ಯಾನ್ ಮಾಡಲಾಗಿದೆ.

ಈಗೊಂದು ಮೂರ್ನಾಲ್ಕು ವರ್ಷಗಳ ಹಿಂದಿನ ಮಾತು. ನಮ್ಮ ಮನೆಯ ಹಿಂಬದಿಯಲ್ಲಿ ಕಾಂಪೌಂಡಿಗೆ ಹತ್ತಿಕೊಂಡಂತೆ ಪಾರ್ಕೊಂದಿದೆ. ಆಗ ಪಾರ್ಕಿಗೆ ಬರುವವರ ಸಂಖ್ಯೆ ಕಡಿಮೆಯಿದ್ದಿತು. ಅದೊಂದು ಭಾನುವಾರ ಪಾರ್ಕಿನಲ್ಲಿ ಏನೋ ಗುಜುಗುಜು ಕೇಳಿಸಿದಂತಾಗಿ ಮೊದಲ ಮಹಡಿಯಿಂದ ಕೆಳಗೆ ಬಗ್ಗಿ ನೋಡಿದೆ. ಏಳೆಂಟು ಹುಡುಗರ ಗುಂಪು. ಹತ್ತರಿಂದ ಹದಿನೈದು ವರ್ಷದ ಬಾಲಕರು. ಕೆಲವರು ಕೈಯಲ್ಲಿ ಸಿಗರೇಟು ಹಿಡಿದು ಧಮ್ ಹೊಡೆಯುತ್ತಿದ್ದರೆ, ಮಿಕ್ಕವರು ಕೈಯಲ್ಲಿದ್ದ ಮೊಬೈಲ್ ಸ್ಕ್ರೀನಿನ ಮೇಲೆ ಕಣ್ಣುನೆಟ್ಟು ತಮ್ಮದೇ ಲೋಕದಲ್ಲಿ ಮುಳುಗಿದ್ದರು. ಅವರನ್ನು ನೋಡಿ ನನಗೆ ಅಚ್ಚರಿಯೆನಿಸಿ ಗದರಿದೆ. ‘ನಿಮ್ಮ ಮನೆಯವರ ನಂಬರ್ ಕೊಡ್ರೋ ಫೋನ್ ಮಾಡ್ತೀನಿ’ ಎನ್ನುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತುಬಿಟ್ಟರು.

ಹುಟ್ಟುವಾಗಲೇ ಸ್ವಂತ ಮನೆ, ಕಾರು, ಟೀವಿ ಮುಂತಾದ ಸಕಲ ಸೌಭಾಗ್ಯಗಳನ್ನೂ ಪಡೆದು ಬರುವ ಇಂದಿನ ಅನೇಕ ಸ್ಥಿತಿವಂತ ಮಕ್ಕಳಿಗೆ ಹಣದ ಮಹತ್ವವೇ ಗೊತ್ತಿರುವುದಿಲ್ಲ. ಮಕ್ಕಳ ಮೇಲಿನ ಅತಿ ವ್ಯಾಮೋಹವುಳ್ಳ ಹೆತ್ತವರಿಂದ ಚಿಕ್ಕ ವಯಸ್ಸಿಗೇ ಕೈಗೊಂದು ದುಬಾರಿ ಮೊಬೈಲು, ಜೇಬು ತುಂಬಾ ಪಾಕೆಟ್ ಮನಿ ಪಡೆದುಕೊಳ್ಳುವ ಮಕ್ಕಳು ಸಹವಾಸ ದೋಷದಿಂದಲೋ ಸ್ಟೇಟಸ್ ತೋರಿಸಿಕೊಳ್ಳಬೇಕೆಂಬ ಕಾರಣದಿಂದಲೋ ಬಹು ಸುಲಭವಾಗಿ ಅಡ್ಡದಾರಿ ಹಿಡಿಯಬಲ್ಲರು. ಹಾಗಾಗಿ ಮಕ್ಕಳಿಗೆ ನೈತಿಕ ಶಿಕ್ಷಣದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ಮಕ್ಕಳು ಮತ್ತು ಯುವಜನತೆ ಅಡ್ಡದಾರಿ ಹಿಡಿಯದಿರುವಂತೆ